# ಉಪ ತಹಶೀಲ್ದಾರರು, ನಾಡ ಕಾರ್ಯಲಯ, ಇಟ್ಟಿಗಿ ರವರ ನ್ಯಾಯಾಲಯ

| ಅರ್ಜಿದಾರರು | ತಕರಾರುದಾರರು |
|---|---|
| 1)ಎ.ರತ್ನಮ್ಮ ಗಂಡ ಎ.ಶಿವಪುತ್ರಪ್ಪ<br>2)ಎ.ಪಾಲ್ಲಾಕ್ಷಪ್ಪ ತಂದೆ ಶೇಖರಪ್ಪ<br>3)ಎ.ಮಮತ ಗಂಡ ಲೋಕೇಶ<br>4)ಎ.ಗಂಗಪ್ಪ ತಂದೆ ಶೇಖರಪ್ಪ<br>5)ಎ.ಸೋಮಪ್ಪ ತಂದೆ ಎ.ಶೇಖರಪ್ಪ<br>6)ಎ.ಪ್ರಕಾಶ ತಂದೆ ಎ.ಶೇಖರಪ್ಪ<br>7)ಎ.ದೊಡ್ಡಬಸ್ಸಪ್ಪ ತಂದೆ ಎ.ಶೇಖರಪ್ಪ,<br>ಹಿರೇಮಲ್ಲನಕೇರಿ ಗ್ರಾಮ, ಹಡಗಲಿ ತಾ. | ಎ.ಸೋಮಪ್ಪ ತಂದೆ ಶೇಖರಪ್ಪ,<br>ಹಿರೇಮಲ್ಲನಕೇರಿ ಗ್ರಾಮ, ಹಡಗಲಿ ತಾ. |

**ವಿವಾದಿತ ಜಮೀನಿನ ವಿವರ:**

| ಕ್ರ.ಸಂ. | ಗ್ರಾಮದ ಹೆಸರು | ಸರ್ವೆ ನಂಬರ್ | ವಿಸ್ತೀರ್ಣ | ತರಹೆ |
|---|---|---|---|---|
| 1. | ಹಿರೇಮಲನಕೇರಿ | 89/1 | 5–51 | ಖುಷ್ಕಿ |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಹಿರೇಮಲ್ಲನಕೇರಿ ಗ್ರಾಮದ ಸ.ನಂ.89/1 ವಿ:5–51 ಎಕರೆ ಜಮೀನಿಗೆ ಸಂಬಂಧಿಸಿದಂತೆ, ಹಿರೇಮಲ್ಲನಕೇರಿ ಗ್ರಾಮದ ನಿವಾಸಿಯಾದ ಎ.ಪಾಲಾಕ್ಷಪ್ಪ ತಂದೆ ಶೇಖರಪ್ಪ ಇವರು ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ದಿ:06–11–2015 ರಂದು ಅರ್ಜಿ ಸಲ್ಲಿಸಿದರು. ಗ್ರಾಮದಲ್ಲಿ ನಮೂನೆ 21 ರ ನೋಟಿಸನ್ನು ದಿನಾಂಕ:08–12/2015 ರಂದು ಜಾರಿ ಮಾಡಲಾಗಿ ನಿಗದಿತ ಅವಧಿಯೊಳಗೆ ಅಂದರೆ ದಿನಾಂಕ 26–12–2015 ರಂದು ಹಿರೇಮಲ್ಲನಕೇರಿ ಗ್ರಾಮದ ನಿವಾಸಿಯಾದ ಎ.ಸೋಮಪ್ಪ ತಂದೆ ಶೇಖರಪ್ಪ ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು, ಇಟ್ಟಿಗಿರವರು M.NO.52/2015-16 ರ ಕಡತವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಈ ಕಾರ್ಯಾಲಯಕ್ಕೆ ವರದಿ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ವಿಚಾರಣೆ ದಿ:06–04–2016 ರಂದು ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮತ್ತು ತಕರಾರುದಾರು ಪ್ರಕರಣದ ವಿಚಾರಣೆಗೆ ಹಾಜರಾಗಿರುತ್ತಾರೆ. ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿ ಮಮತ ಗಂಡ ಎ.ಲೋಕೇಶ ಹೆಸರು ತಪ್ಪಾಗಿದ್ದು, ಭಾರತಿ ಗಂಡ ಎ.ಲೋಕೇಶ ಎಂದು ಆಗಬೇಕೆಂದು ಮೌಖಿಕವಾಗಿ ತಿಳಿಸಿದರು. ತಕರಾರುದಾರರು ಭಾರತಿ ಗಂಡ ಎ.ಲೋಕೇಶ್ ಇವರಿಗೆ ಸಂಬಂಧಿಸಿದ ಉತ್ತರ ಜೀವಿತ ಪ್ರಮಾಣ ಪತ್ರದ ಪ್ರತಿ, ಚುನಾವಣೆ ಗುರುತಿನ ಚೀಟಿ ಪ್ರತಿ, ಆಧಾರ್ ಕಾರ್ಡ್ ಪ್ರತಿ ಸಲ್ಲಿಸಿರುತ್ತಾರೆ. ಮಮತ ಗಂಡ ಎ.ಲೋಕೇಶ್ ಎಂಬುದು ತಪ್ಪಾಗಿದ್ದು, ಅದನ್ನು ಭಾರತಿ ಗಂಡ ಎ.ಲೋಕೇಶ್ ಎಂದು ತಿದ್ದುಪಡಿ ಮಾಡಿ ಆದೇಶ ಮಾಡಿದಲ್ಲಿ ನಮ್ಮದು ಯಾವುದೇ ತಕರಾರು ಇರುವುದಿಲ್ಲ ಎಂದು ಮೌಖಿಕವಾಗಿ ತಿಳಿಸಿದರು. ಅರ್ಜಿದಾರರು ಮತ್ತು ತಕರಾರುದಾರರು ಇಬ್ಬರು ಇದನ್ನು ಒಪ್ಪಿರುತ್ತಾರೆ ಮತ್ತು ದಾಖಲೆಗಳನ್ನು ಪರಿಶೀಲಿಸಲಾಗಿ ಅರ್ಜಿದಾರರು ಅರ್ಜಿ ಸಲ್ಲಿಸುವಾಗ ಸಲ್ಲಿಸಿದ ಹಕ್ಕು ಬದಲಾವಣೆ ಅರ್ಜಿಯಲ್ಲಿ ಮತ್ತು ಕೈ ಬರಹದ ವಂಶವೃಕ್ಷದಲ್ಲಿ ಮಮತ ಗಂಡ ಎ.ಲೋಕೇಶ್ ಎಂದು ನಮೂದು ಇರುತ್ತದೆ. ಈಗ ಸಲ್ಲಿಸಿರುವ ಉತ್ತರ ಜೀವಿತ ಪ್ರಮಾಣ ಪತ್ರದಲ್ಲಿ ಅಂಬಿಗರ ಲೋಕೇಶ್ ಇವರ ಹೆಂಡತಿ ಹೆಸರು ಭಾರತಿ ನಿಂಗಪ್ಪ ಗುಡಗೂರು ಎಂದು, ಚುನಾವಣಾ ಗುರುತಿನ ಚೀಟಿ ಸಂಖ್ಯೆ RJV3348224 ರಲ್ಲಿ ಗೂಡಗೂರ ಭಾರತಿ ಎಂದು ಮತ್ತು ಆಧಾರ ಕಾರ್ಡ್‌ನಲ್ಲಿ ಭಾರತಿ ಗುಡಗೂರ ಎಂದು ನಮೂದು ಇರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ನಾ.ಕಾ.ಇ/ಪಹಣಿ/ವಿವಾದ/15/2015–16

ದಿನಾಂಕ:27–04–2016

**ಆದೇಶ**

ಪೀಟೀಕೆಯಲ್ಲಿ ವಿವರಿಸಿದ ವಾಸ್ತವಾಂಶ ಮತ್ತು ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 128 ಮತ್ತು 129ರ ಪ್ರಕಾರ M.NO.52/2015-16 ರ ಪ್ರಕರಣದಲ್ಲಿ ಮಮತ ಗಂಡ ಎ.ಲೋಕೇಶ್ ಎಂಬುದು ತಪ್ಪಾಗಿದ್ದು, ಅದನ್ನು ಭಾರತಿ ಗಂಡ ಎ.ಲೋಕೇಶ್ ಎಂದು ಸರಿಪಡಿಸಿ ಚೆಕ್‌ಲಿಸ್ಟ್ ಪ್ರಕಾರ ಉಳಿದ ಹೆಸರುಗಳೊಂದಿಗೆ ಜಂಟಿಯಾಗಿ ಪೋತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಉಪ–ತಹಶೀಲ್ದಾರರು
ನಾಡ ಕಾರ್ಯಾಲಯ,
ಇಟ್ಟಿಗಿ.

ಪ್ರತಿಯನ್ನು,

1. ಅರ್ಜಿದಾರರು ಮತ್ತು ತಕರಾರುದಾರು ಇವರಿಗೆ
2. ಭೂಮಿ ಕೇಂದ್ರ, ತಾಲೂಕು ಕಾರ್ಯಾಲಯ, ಹೂವಿನಹಡಗಲಿ ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ
3. ಶುದ್ಧಪ್ರತಿ ಕಡತಕ್ಕೆ.